ಮೂಲ ದಾವಾ ಸಂಖ್ಯೆ. 211/2016 ಡಿ ಡಬ್ಲ್ಯೂ 2

(ದಿನಾಂಕ 14-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಬಿ ಆರ್ ವಕೀಲರಿಂದಃ-

ಈ ದಾವೆಯನ್ನು ನಾಗಮ್ಮ ಇವರು ದೊಡ್ಡವೀರಪ್ಪ ಇವರ ಮೇಲೆ ದಾಖಲಿಸಿದ್ದಾರೆ. ಮನೆ ವಿಚಾರಕ್ಕಾಗಿ ದಾಖಲಿಸಿದ್ದಾರೆ. ಸದರಿ ಮನೆಯ ಪ್ಲಾಟ್ ನಂ.2/120 ಇರುತ್ತದೆ ವಾರ್ಡ ನಂ.12 ಇರುತ್ತದೆ ಹಾಗೂ ಡೋರ್ ನಂ.2/120 ಇರುತ್ತದೆ. ವಾರ್ಡ ನಂ.2 ಡೋರ್ ನಂ.13 ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ಪ್ಲಾಟ್ ನಂ.13 ರ ಪೂಃ ಕೂಡ್ಲಗಿ ಹೆಚ್ ಬಿ ಹಳ್ಳಿ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಪ್ಲಾಟ್ ನಂ.2/120 ರ ಚಕ್ಕುಬಂದಿ ನನಗೆ ಗೊತ್ತಿಲ್ಲ. ನನ್ನ ಮನೆಯ ಪ್ಲಾಟ್ ನಂ., ನನ್ನ ಮನೆಯ ಡೋರ್ ನಂ., ನನ್ನ ಮನೆಯ ವಾರ್ಡ ನಂ., ನನಗೆ ಹೇಳಲು ಬರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ, ಪ್ರತಿವಾದಿ ಮತ್ತು ನಾನು ವಿಶ್ವಾಸಿಕರು, ಒಬ್ಬರಿಗೊಬ್ಬರು ಬೇಕಾದವರು ಎಂದರೆ ಸರಿ. ಆ ಕಾರಣದಿಂದ ನಾನು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುತ್ತೇನೆಂದರೆ ಸರಿ. ಆ ಕಾರಣದಿಂದಾಗಿ ನನಗೆ ಸಂಪೂರ್ಣ ಮಾಹಿತಿ ಇಲ್ಲವೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ